ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 04.10.2023.

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ನನ್ನ ಜಮೀನು ಉತ್ತರಕ್ಕೆ ಇದ್ದು, ವಾದಿ ಜಮೀನು ದಕ್ಷಿಣಕ್ಕೆ ಇರುತ್ತದೆ ಎಂದರೆ ಸರಿ. ನನ್ನ ಮತ್ತು ವಾದಿ ಜಮೀನಿನ ಮದ್ಯ ಪೂರ್ವ-ಪಶ್ಚಿಮೋತ್ತರವಾಗಿ ಒಂದು ಬಂದಾರಿ ಇತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಈಗ ಇಲ್ಲಾ ಎಂದು ನುಡಿಯುತ್ತಾರೆ. ನಿಪಿ-3 ರಲ್ಲಿರುವ ವ್ಯಕ್ತಿ ವಾದಿ ಇರುತ್ತಾನೆ ಎಂದರೆ ಸರಿ. ಆದರೆ ಅದು ಭೂಮಿಯ ಜಮೀನು

ಇರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯ ಜಮೀನು ಮುಂಚೆ ಗೂಡುಮಾ ಮುಲ್ಲಾ ರವರಿಗೆ ಸಂಬಂಧಪಟ್ಟಿತ್ತು ಎಂದರೆ ಸರಿ. ಸದರಿ ಗೂಡುಮಾ ಮುಲ್ಲಾ ರವರು ವಾದಿಯ ತಂದೆಯಾದ ಅಬ್ದುಲ್ ಅಲಿ ರವರಿಗೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

ವಾದಿಯ ತಂದೆ ಸದರಿ ಜಮೀನನ್ನು 1970 ರಲ್ಲಿ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲಾ. ನಿಪಿ-2 ಆಗುವ ಕಾಲಕ್ಕೆ ವಾದಿಯ ತಂದೆ ಖರೀದಿಸಿದ ಜಮೀನು ಗುಡುಮಾ ರವರ ಹೆಸರಿನಲ್ಲಿ ಪಹಣಿ ಇತ್ತು ಎಂದರೆ ಸರಿ. ನಿಪಿ-2 ಆಗುವ ಕಾಲಕ್ಕೆ ಸದರಿ ಗುಡುಮಾ ರವರು ವಾದಿ ತಂದೆಗೆ 4 ಎಕರೆ 18 ಗುಂಟೆ ಜಮೀನಿನ ಕಬ್ಜೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2 ಎಕರೆ 18 ಗುಂಟೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-2 ರ ಪ್ರಕಾರ ವಾದಿ ತಂದೆ ಹೆಸರಿನಲ್ಲಿ 4 ಎಕರೆ 18 ಗುಂಟೆ ಜಮೀನಿಗೆ ಪಹಣಿಯಾಗಿರುತ್ತದೆ ಎಂದರೆ ಸಾಕ್ಷಿ ಅವರು ಹಣ ಕೊಟ್ಟು ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ವಾದಿ ತಂದೆ ಆ ರೀತಿ ಹಣ ಕೊಟ್ಟ ತಮ್ಮ ಹೆಸರಿನಲ್ಲಿ ಪಹಣಿ ಮಾಡಿಕೊಂಡಿರುತ್ತಾರೆ ಎಂಬ ಸಂಗತಿ ಸುಮಾರು 2-3 ವರ್ಷದ ಹಿಂದೆ ಗೊತ್ತಾಗಿರುತ್ತದೆ. ವಾದಿಯ ಜಮೀನಿನ ಪೂರ್ವಕ್ಕೆ ಮಸ್ತಾನಸಾಬ ರವರ ಜಮೀನು ಇದೆ ಎಂದರೆ ಸರಿ. ಪಶ್ಚಿಮ ದೂಳು ಹರಿಜನ ರವರ ಜಮೀನು ಇದೆ ಎಂದರೆ ಸರಿ. ಉತ್ತರಕ್ಕೆ ನನ್ನ ಜಮೀನು ಇದೆ ಎಂದರೆ ಸರಿ, ಅದೇ ರೀತಿ ದಕ್ಷಿಣಕ್ಕೆ ಚಂದುಲಾಲ್ ರವರ ಜಮೀನು ಇದೆ ಎಂದರೆ ಸರಿ. ಇವತ್ತಿನವರೆಗೂ ವಾದಿ ಹೆಸರಿನಲ್ಲಿ ಪಹಣಿಗಳು 4 ಎಕರೆ 18 ಗುಂಟೆ ಬರುತ್ತಿವೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ಹೆಸರಿನಲ್ಲಿರುವ ಜಮೀನು ನನ್ನ ಅಜ್ಜನಿಂದ ಬಂದಿರುತ್ತವೆ ಹಾಗೂ ಅವುಗಳನ್ನು ನನ್ನ ಅಜ್ಜ ಖರೀದಿಸಿತ್ತಾನೋ ಇಲ್ಲವೋ ನನಗೆ ಗೊತ್ತಿಲ್ಲಾ. ವಾದಿ ನಮಗೆ ಸಂಬಂಧಪಟ್ಟ 2 ಎಕರೆ ಜಮೀನನ್ನು ಕಬ್ಜೆ ತೆಗೆದುಕೊಳ್ಳಲು ಪ್ರಯತ್ನಿಸುತ್ತಿದ್ದಾನೆ ಎಂದು ನಾನು ಹೇಳುತ್ತೇನೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಇಲ್ಲಾ, ಆತನೇ ನನಗೆ ಸಂಬಂಧಪಟ್ಟ 2 ಎಕರೆ ಜಮೀನನ್ನು ಕಬಳಿಸುವ ಪ್ರಯತ್ನ ಮಾಡುತ್ತಿದ್ದಾನೆ ಎಂದು ನುಡಿಯುತ್ತಾರೆ. ನನ್ನ ಹೆಸರಿನಲ್ಲಿ ಜಮೀನು 4 ಎಕರೆ 18 ಗುಂಟೆ ಇರುತ್ತದೆ. ನಿಡಿ-7 ರ ಪ್ರಕಾರ ನನ್ನ ಹೆಸರಿನಲ್ಲಿ 2 ಎಕರೆ 18 ಗುಂಟೆ ಇದೆ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ 2 ಎಕರೆ 18 ಗುಂಟೆ ಜಮೀನು ಇದ್ದು, ಅಷ್ಟೆ ಕಬ್ಜೆಯನ್ನು ನಾನು ಹೊಂದಿರುತ್ತೇನೆ ಎಂದರೆ ಸರಿಯಲ್ಲ.

ನಾನು ಈ ದಾವೆ ಮಾಡುವ ಪೂರ್ವದಲ್ಲಿ ವಾದಿಯ 2 ಎಕರೆ ಜಮೀನನ್ನು ಬಂದಾರಿ ಒಡೆದು, ಕಬ್ಜೆ ಪಡೆಯಲು ಪ್ರಯತ್ನಿಸಿದ್ದರಿಂದ ವಾದಿ ಈ ದಾವೆಯನ್ನು ನನ್ನ ಮೇಲೆ ಹಾಕಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಮತ್ತು ವಾದಿಯ ಜಮೀನನ್ನು ನ್ಯಾಯಾಲಯದಿಂದ ಕಮೀಷನರ್ ನೇಮಿಸಿ ಅಳತೆ ಮಾಡಲು ನನ್ನದು ಯಾವುದೇ ತಕರಾರು ಇರುವುದಿಲ್ಲ.

<u>ಮರು ವಿಚಾರಣೆ: ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**